**ಅಪರ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆಃ 1620/2021**

ಫಿರ್ಯಾದಿದಾರ ಃ ಎಂ.ಕೆ. ಗುರುಪ್ರಸಾದ್
ಬಿನ್ ಲೇಟ್ ಎಂ. ಕೃಷ್ಣಪ್ಪ,
ವಯಸ್ಸು ಸುಮಾರು 39 ವರ್ಷಗಳು,
ವಾಸಃ ವಿರೂಪಾಕ್ಷೇಶ್ವರ ರಸ್ತೆ,
ಮಿರ್ಲೆ ಗ್ರಾಮ, ಅಂಚೆ ಮತ್ತು ಹೋಬಳಿ,
ಕೆ.ಆರ್. ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು ಃ ಹರೀಶ ಟಿ. ಬಿನ್ ಲೇಟ್ ತಮ್ಮೇಗೌಡ (ಶಾರದಮ್ಮ)
ವಯಸ್ಸು ಸುಮಾರು 30 ವರ್ಷಗಳು,
ವಾಸಃ ರಾಮದೇವರ ಬೀದಿ,
ಮಿರ್ಲೆ ಗ್ರಾಮ ಮತ್ತು ಅಂಚೆ ಮತ್ತು ಹೋಬಳಿ,
ಕೆ.ಆರ್. ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**ಆಪಾದನೆ**

ಆರೋಪಿಯಾದ ನೀವು, ಫಿರ್ಯಾದುದಾರರಿಂದ ನಿಮ್ಮ ಮದುವೆ ಖರ್ಚಿಗಾಗಿ/ಹಿಂದೆ ಮಾಡಿರುವ ಸಾಲ ತೀರಿಸಲು/ಗೃಹಕೃತ್ಯದ ಖರ್ಚಿಗಾಗಿ ರೂ.2,00,000/- ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು ಮರುಪಾವತಿಸಲು, 17.08.2021ರ ದಿನಾಂಕ ಇರುವ ರೂ.2,00,000/-ರ ಯಸ್ ಬ್ಯಾಂಕ್, ಜಯಲಕ್ಷ್ಮಿಪುರಂ ಶಾಖೆಯ ಚೆಕ್ ಸಂಖ್ಯೆ - 260628 ಅನ್ನು ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದುದಾರರು ತಮ್ಮ ಬ್ಯಾಂಕ್ ಖಾತೆ ಇರುವ ಮೈಸೂರು-ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಹುಣಸೂರು ತಾಲ್ಲೂಕಿನ ಬಿಳಿಕೆರೆ ಶಾಖೆಗೆ ನಗದೀಕರಣಕ್ಕಾಗಿ ಹಾಜರುಪಡಿಸಿದಾಗ, ಸದರಿ ಚೆಕ್ಕು "ಖಾತೆ ನಿಷ್ಕ್ರಿಯವಾದ ಖಾತೆಯಾಗಿದೆ **(Account Dormant)**" ಎಂಬ ರಿಟರ್ನ್ ಮೆಮೋದೊಂದಿಗೆ ಮಾನ್ಯವಾಗದೆ ಫಿರ್ಯಾದುದಾರರ ಬ್ಯಾಂಕಿಗೆ ವಾಪಾಸಾಗಿರುತ್ತದೆ. ಸದರಿ ಚೆಕ್ ಹಾಗೂ ದಿಃ 23-08-2021 ರಂದು ಬಂದ ರಿಟರ್ನ್ ಮೆಮೋವನ್ನು ಫಿರ್ಯಾದುದಾರರು ದಿಃ 26-08-2021ರಂದು ಸದರಿ ಬ್ಯಾಂಕಿನಿಂದ ಪಡೆದುಕೊಂಡಿರುತ್ತಾರೆ. ಆದ್ದರಿಂದ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿಃ 08.09.2021ರಂದು ನೊಂದಾಯಿತ ಅಂಚೆ ಮೂಲಕ ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಇದುವರೆವಿಗೂ ಫಿರ್ಯಾದುದಾರರಿಗೆ ಚೆಕ್ಕಿನಲ್ಲಿ ನಮೂದಿಸಿದ ಹಣವನ್ನಾಗಲೀ ಅಥವಾ ಸದರಿ ನೋಟೀಸಿಗೆ ಪ್ರತ್ಯುತ್ತರವನ್ನಾಗಲೀ ನೀಡಿರುವುದಿಲ್ಲ. ಆದಕಾರಣ ನೀವು ಎನ್.ಐ ಆ್ಯಕ್ಟ್ ಕಲಂ **138**ರಂತೆ ಶಿಕ್ಷಾರ್ಹ ಅಪರಾಧ ಎಸಗಿದ್ದೀರಿ ಎಂದು ನಿಮ್ಮ ಮೇಲೆ ಆಪಾದನೆ ಮಾಡಲಾಗಿದೆ.

ಮೇಲ್ಕಂಡ ಅಪರಾದವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುವುದರಿಂದ, ನೀವು ಈ ನ್ಯಾಯಾಲಯದ ವಿಚಾರಣೆಗೆ ಒಳಪಡುತ್ತೀರಿ.

ಪ್ರಶ್ನೆ **1.** ಇದೀಗ ಓದಿ ವಿವರಿಸಿದ ಆಪಾದನೆ ನಿಮಗೆ ಅರ್ಥವಾಯಿತೆ**?**

ಉತ್ತರಃ

ಪ್ರಶ್ನೆ **2.** ಈ ಆಪಾದನೆಯ ಬಗ್ಗೆ ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ
ಯಾವುದಾದರೂ ಪ್ರತಿ ರಕ್ಷಣೆ ಇದೆಯೇ**?**

ಉತ್ತರಃ

ದಿಃ **15.07.2022**

(ಪೂಜಾ ಬೆಳಕೇರಿ)
ಅಪರ ಸಿವಿಲ್ ನ್ಯಾಯಾಧೀಶರು ಹಾಗೂ
ದಂಡಾಧಿಕಾರಿಗಳು, ಹುಣಸೂರು.

Substance of acquisition read over to the accused in the Kannada language. He pleaded not guilty and claimed to be tried.

Posted for complainant evidence by .

**PRL.CIVIL JUDGE & J.M.F.C.,**
**HUNSUR.**